ಶ್ರೀಮತಿ ಲಕ್ಷ್ಮೀದೇವಿ ರಾಮಣ್ಣ.—ಭೂದಾನ ವಿದ್ಯಾದಾನ ಯೋಜನೆಯಿಂದ ಪಡೆದಿರತಕ್ಕ ಜಮೀನುಗಳು ಯಾರ ಹೆಸರಿಗೆ ರಿಜಿಸ್ಟರಾಗಿವೆ? ಸರ್ಕಾರದವರ ಹೆಸರಿಗೇ ಅಥವ ಸಂಬಂಧಪಟ್ಟ ಸ್ಕೂಲುಗಳ ಹೆಸರಿಗೇ?

ಶ್ರೀ ಎಚ್. ಸಿದ್ದವೀರಪ್ಪ.—ಅದು ವಿದ್ಯಾಭ್ಯಾಸ ಇಲಾಖೆಯ ಹೆಸರಿಗೆ ರಿಜಿಸ್ಟರಾಗಿದೆ.

*ಶ್ರೀಮತಿ ಲಕ್ಷ್ಮೀದೇವಿರಾಮಣ್ಣ.—ಈ ಜಮೀನುಗಳಿಗೆ ಕಂದಾಯವನ್ನು ವಿದ್ಯಾಭ್ಯಾಸದ ಇಲಾಖೆಯವರು ಕೊಡುತ್ತಾರೆಯೇ?

ಶ್ರೀ ಎಚ್. ಸಿದ್ದವೀರಪ್ಪ.—ನನಗೆ ನೋಟಿಸ್ ಬೇಕು. ತಿಳಿದು ಹೇಳುತ್ತೇನೆ.

ಶ್ರೀಮತಿ ಲಕ್ಷ್ಮೀದೇವಿ ರಾಮಣ್ಣ.—30 ಸಾವಿರ ಎಕರೆ ಗಳಿಗಿಂತ ಹೆಚ್ಚು ಜಮೀನು ಬಂದಿದೆ. ಇದರಲ್ಲಿ ಆರು ಸಾವಿರ ಎಕರೆ ಮಾತ್ರ ವ್ಯವಸಾಯ ಮಾಡಿದ್ದೇವೆಂದು ಹೇಳಿದ್ದೀರಿ. ಈ ಆರುಸಾವಿರ ಎಕರೆಗಳಿಂದ ಎಷ್ಟು ಆದಾಯ ಬರುತ್ತದೆ ಎಂಬುದನ್ನು ತಿಳಿಸುತ್ತೀರಾ?

ಶ್ರೀ ಎಚ್. ಸಿದ್ದವೀರಪ್ಪ.—ಇನ್ನೂ ಆದಾಯಪಟ್ಟಿಯನ್ನು ತೆಗೆದಿಲ್ಲ.

ಶ್ರೀಮತಿ ಲಕ್ಷ್ಮೀದೇವಿ ರಾಮಣ್ಣ.—Land utilisation officer ಎಂದು ಒಬ್ಬ ಅಧಿಕಾರಿಯನ್ನು ನೇಮಕಮಾಡಿದ್ದೇವೆಂದು ಹೇಳಿದಿರಿ. ಅವರು ಯಾವ ಗ್ರೇಡಿನವರು ಎಂಬುದನ್ನು ತಿಳಿಸುತ್ತೀರಾ?

ಶ್ರೀ. ಎಚ್. ಸಿದ್ದವೀರಪ್ಪ.—Deputy Director of Agriculture. .. ....

Mr. SPEAKER.—If the Hon'ble Minister is not able to answer this question, we may take it up on some other day.

Sri H. SIDDAVEERAPPA.—What happened was that when it was called, the Hon'ble Member was not present in the House. Therefore, I sent back the file thinking that everything was over. Now I am getting back the file.

ಶ್ರೀ ಕೆ. ಪ್ರಭಾಕರ್.—ಭೂದಾನ ವಿದ್ಯಾದಾನ ಸಂಬಂಧದಲ್ಲಿ ತೆಗೆದುಕೊಂಡಿರುವ ಜಮೀನನ್ನು ಸಾಗುವಳಿಮಾಡುವುದಕ್ಕಾಗಿ ವಿದ್ಯಾಭ್ಯಾಸ ಇಲಾಖೆಗೆ ಸರ್ಕಾರದವರು ಕೊಟ್ಟಿರತ್ಕ implements ಬೆಲೆ ಸರ್ಕಾರದವರಿಗೆ ಗೊತ್ತಿದೆಯೇ?

Sri H. SIDDAVEERAPPA.—If the Hon'ble Member puts the question, I will answer that specifically. I have not got the figures with me.

Sri K. LAKKAPPA.—Government assistance is being rendered to approved Educational Institutions by way of loans to agricultural operations ಎಂದು ಹೇಳಿದ್ದೀರಿ. ಸಹಾಯವನ್ನು ಒದಗಿಸಿದ್ದೇನೆಂದು ಹೇಳಿಲ್ಲ. ಸಹಾಯವನ್ನೊದಗಿಸಿದ್ದೀರಾ?

Sri H. SIDDAVEERAPPA.—I have not got further details. The file is sent back. This may be taken up on 1st October, if the Hon'ble Members so desire.

Mr. SPEAKER.—This question will be taken up on 1st October 1956.

Houses for officials in Magadi Taluk.

Q.—744. Sri S. SIDDAPPA (Magadi).—Will the Government be pleased to state :—

whether they intend to construct dwelling houses to all the officers and officials in Magadi taluk ?

A.—Sri A. G. RAMACHANDRA RAO (Minister for Law and Education).—Yes, to the extent funds permit.

ಎಸ್. ಸಿದ್ದಪ್ಪ.—ಎಷ್ಟು ದಿವಸಗಳೊಳಗಾಗಿ ಈ ಕಾರ್ಯ ನೆರವೇರುತ್ತದೆ?

*ಶ್ರೀ ಎಚ್ ಸಿದ್ದವೀರಪ್ಪ.—ಈಗಾಗಲೇ ಮಾಗಡಿಯಲ್ಲಿ ಅಸಿಸ್ಟೆಂಟ್ ಸರ್ಜ್ ಅವರಿಗೆ ವಾಸದ ಮನೆಯನ್ನು ಕೊಟ್ಟಿರುವುದು ಮಾನ್ಯ ಸದಸ್ಯರ ತಿಳಿವಳಿಕೆಯಲ್ಲಿದೆ. ಬಾಕಿ ಪಬ್ಲಿಕ್ ವರ್ಕ್ಸ್ ಇಲಾಖೆ, ಪೋಲೀಸ್ ಇಲಾಖೆ, ಮತ್ತು ಇತರ ಇಲಾಖೆಗಳ ನೌಕರರಿಗೆ ವಾಸದ ಮನೆಗಳನ್ನು ಕಟ್ಟಲು ಅಂದಾಜು ವಗೈರೆ ತಯಾರಾಗಿವೆ. ಒಂದು ಲಕ್ಷಕ್ಕೆ ಅಂದಾಜಾಗಿದೆ. ಹಣ ಒದಗಿದ ಕೂಡಲೇ ಕಟ್ಟಿಸುತ್ತೇವೆ.

ಶ್ರೀ ಎಸ್. ಸಿದ್ದಪ್ಪ.—ಈಗ ತಾಲ್ಲೂಕು ಆಫೀಸಿನಲ್ಲಿ ಮತ್ತು ಇತರ ಕಡೆಗಳಲ್ಲಿರುವ ನೌಕರರ ಮುಖ್ಯವಾಗಿ ಸಣ್ಣ ನೌಕರರ ವಸತಿ ಗೃಹಗಳನ್ನು ನಿರ್ಮಾಣಮಾಡಲು ಒಂದು ಯೋಜನೆ ಏನಾದರೂ ತಯಾರಾಗಿದೆಯೇ?

ಶ್ರೀ ಎಚ್. ಸಿದ್ದವೀರಪ್ಪ.—ಅರಣ್ಯ ಇಲಾಖೆಗೆ ಒಂದು ಸ್ಕೀಂ ಇದೆ. ಪೋಲೀಸ್ ಇಲಾಖೆಗೆ, ನಮ್ಮಲ್ಲಿರುವ ಎಲ್ಲ ಕೆಳದರ್ಜೆ ನೌಕರರಿಗೂ ಮನೆಗಳನ್ನು ಕಟ್ಟಿಸಲಾಗಿದೆ. ಕೇಂದ್ರ ಸರ್ಕಾರದವರು ಒಂದು ಸ್ಕೀಂ ಹಾಕಿ ಈ ವರ್ಷ ಸಲ್ಪಹಣವನ್ನೊದಗಿಸಿದ್ದಾರೆ. ಆದರೆ ಒಂದೇ ದಿವಸದಲ್ಲಿ ಆಗುವುದಿಲ್ಲ; ಕಾಲಕ್ರಮೇಣ, ನಾಲ್ಕೈದು ವರ್ಷಗಳ ಕಾಲದಲ್ಲಿ ಕೆಲಸವಾಗುತ್ತದೆ,

ಶ್ರೀ ಎಸ್. ಸಿದ್ದಪ್ಪ.—ಬಡನೌಕರರಿಗೆ ವಾಸದ ಗೃಹಗಳನ್ನು ತಾವು ಎಲ್ಲಿಯವರೆಗೆ ಕಟ್ಟಿಸಿಕೊಡುವುದಿಲ್ಲವೋ ಅಲ್ಲಿಯವರೆಗೆ ಇವರಿಗೆ ಮನೆಗಳ ಅಭಾವದಿಂದ ಉಂಟಾಗುವ ತೊಂದರೆ ತಪ್ಪುವುದಿಲ್ಲ. ಆದ್ದರಿಂದ ಸರ್ಕಾರದವರು ವಿಶಾಲಮನಸ್ಸಿನಿಂದ ಬಹಳ ಜಾಗ್ರತೆ ವಾಸದಮನೆಗಳನ್ನು ಕಟ್ಟಿಸಿಕೊಡುತ್ತೀರಾ?

ಶ್ರೀ ಎಚ್. ಸಿದ್ದವೀರಪ್ಪ.—ಕಟ್ಟಿಸಿಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆಂದು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ.